ಹೆದರುವ ಸ್ಥಿತಿಯಲ್ಲಿಲ್ಲ. ಸಿಬ್ಬಂದಿ ವರ್ಗದವರು ತಪ್ಪು ಮಾಡಿದಾಗ ತಮ್ಮ ಮೇಲೆ ಕ್ರಮ ಕೈಗೊಂಡಲ್ಲಿ ತಮ್ಮನ್ನು ರಕ್ಷಣೆ ಮಾಡುವವರು ಒಬ್ಬರಿದ್ದಾರೆಂಬ ಭಾವನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ವರ್ತಿಸುತ್ತಿರುವ ಪರಿಸ್ಥಿತಿಯಿರುವ ಈ ಸಂದರ್ಭದಲ್ಲಿ ಇದನ್ನು ತಡೆಗಟ್ಟದಿದ್ದರೆ ಜನರು ತಮಗೆ ಮತ ನೀಡಿ ಗೆಲ್ಲಿಸಿ ರಾಜ್ಯದ ಆಡಳಿತ ನಡೆಸಲು ಏನು ಅಧಿಕಾರ ಕೊಟ್ಟಿದ್ದಾರೆ, ಅವರೇ ಅದನ್ನು ತಿರಸ್ಕರಿಸುವ ಪರಿಸ್ಥಿತಿ ಬರಬಹುದೆಂದು ಹೇಳುತ್ತೇನೆ. ಇನ್ನು ರಾಜ್ಯದ ಶಾಸಕರುಗಳು ತಮ್ಮ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೂ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಒದಗಿಸಿರುವುದು ತುಂಬಾ ಸ್ವಾಗತಾರ್ಹವಾದ ವಿಚಾರವಾಗಿದೆ. ನಾವು ಇದಕ್ಕಾಗಿ ಬಹಳ ದಿವಸಗಳಿಂದ ಹೋರಾಟ ಮಾಡಿದ್ದೆವು. ಆದರೆ, ಇಷ್ಟು ಹಣವನ್ನು ಕೊಡುತ್ತೇವೆಂದು ಒಂದು ಕಡೆ ತೋರಿಸಿ ಮತ್ತೊಂದು ಕಡೆ ಕಿತ್ತುಕೊಳ್ಳುವ ಪರಿಸ್ಥಿತಿಯಂಟಾಗಿದೆ. ಇದಕ್ಕಾಗಿ ನೀವು ವಿಧಿಸಿರುವ ಷರತ್ತುಗಳನ್ನು ಗಮನಿಸಿದರೆ ಈ ಹಣ ಬಹುತೇಕ ಶಾಸಕರಾದ ನಮಗೆ ತಲುಪುವುದಿಲ್ಲವೆಂಬ ನಂಬಿಕೆ ಬರುತ್ತದೆ. ಸಂಸತ್ ಸದಸ್ಯರಿಗೆ ಅನುದಾನವಾಗಿ ಎರಡು ಕೋಟಿ ರೂಪಾಯಿಗಳನ್ನು ಒದಗಿಸಿಕೊಟ್ಟು ತಮ್ಮ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯಕ್ರಮ ಹಮ್ಮಿಕೊಳ್ಳಲು ಅವರುಗೂ ಷರತ್ತುಗಳನ್ನು ವಿಧಿಸಲಾಗಿದೆ. ಆದರೆ, ಶಾಸಕರಾಗಿರುವ ನಮಗೆ ಒದಗಿಸಿರುವ ಇಪ್ಪತ್ತೈದು ಲಕ್ಷ ರೂಪಾಯಿಗಳಲ್ಲಿ ದೇವಸ್ಥಾನ ನಿರ್ಮಾಣ, ಜೀರ್ಣೋದ್ಧಾರ, ಸಮುದಾಯ ಭವನದ ನಿರ್ಮಾಣ, ರಸ್ತೆಗಳಿಗೆ ಡಾಂಬರೀಕರಣ ಮಾಡುವುದು, ಶಾಲಾ ಕೊಠಡಿಗಳ ನಿರ್ಮಾಣ ಮುಂತಾದ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲು ಸಾಕಾಗುವುದಿಲ್ಲವಾದ್ದರಿಂದ ಇದನ್ನು ಐವತ್ತು ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿದರೆ ಮಾತ್ರ ಉಪಯೋಗವಾಗುತ್ತದೆ. ಇಲ್ಲದಿದ್ದರೆ, ಒದಗಿಸಿರುವ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಹಿಂತೆಗೆದುಕೊಳ್ಳುವುದು ಸೂಕ್ತ. ಇನ್ನು ಕೊನೆಯದಾಗಿ ತಿಳಿಸುವುದೇನೆಂದರೆ, ಒಬ್ಬ ಶಾಸಕರಾದವರು ತಮ್ಮ ಕ್ಷೇತ್ರದಲ್ಲಿ ತಿರುಗಾಡುವುದಕ್ಕೆ ತಹಶೀಲ್ದಾರ್‌ರವರ ಜೀಪ್ ಇಟ್ಟುಕೊಂಡು ಓಡಾಡುವುದಕ್ಕಾಗುವುದಿಲ್ಲ. ಸಣ್ಣ-ಪುಟ್ಟ ಅಧಿಕಾರಿಗಳಿಗೆ ವಾಹನದ ಸೌಕರ್ಯವಿದ್ದು, ಒಬ್ಬ ಶಾಸಕರಿಗೆ ತಾಲ್ಲೂಕು ಮಟ್ಟದಲ್ಲಿ ತಿರುಗಾಡಲು ವಾಹನ ಸೌಲಭ್ಯ ಒದಗಿಸಿಕೊಟ್ಟರೆ ಅದರಲ್ಲಿ ತಪ್ಪೇನೂ ಇಲ್ಲ. ಶಾಸಕರಿಗೂ ಸರ್ಕಾರ ಅನುಕೂಲತೆ ಒದಗಿಸಿಕೊಡಬೇಕು. ಕಿರಾಣಿ ಹಾಗೂ ದಿನಸಿ ಅಂಗಡಿಗಳಲ್ಲಿ ಬಿಯರ್ ಮಾರಾಟ ಮಾಡುವುದಕ್ಕೆ ತಾವು ನೀಡಿರುವ ಅನುಮತಿಯನ್ನು ಮೊದಲು ರದ್ದುಗೊಳಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ಇದಕ್ಕೆ ರಾಜ್ಯದ 224 ಜನ ಶಾಸಕರೂ ಒಪ್ಪುತ್ತಾರೆ. ಆಡಳಿತ ವ್ಯವಸ್ಥೆಯಲ್ಲಿ ವಿಶೇಷವಾದ ಸುಧಾರಣೆಯನ್ನು ಮಾಡಬೇಕೆಂದು ಹೇಳುತ್ತಾ ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶವಿತ್ತ ಮಾನ್ಯ ಛೇರ್ಮನ್‌ರವರಾದ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

8. ಪ್ರಕಟಣೆ

ಛೇರ್ಮನ್: ಈಗ ಒಂದು ಪ್ರಕಟಣೆ. ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ:

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ದಿನಾಂಕ 29ನೇ ಮಾರ್ಚ್, 2001 ರಂದು 2001ರ ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಯಾವುದೇ ತಿದ್ದುಪಡಿ ಇಲ್ಲದೇ ಅಂಗೀಕರಿಸಿದೆ"

9. ವಿತ್ತೀಯ ಕಾರ್ಯಕಲಾಪ

2001-2002ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

5.20 ಪಿ.ಎಂ.

+ಶ್ರೀ ಹೆಚ್.ಡಿ. ಚೌಡಯ್ಯ (ಕೆರಗೋಡು): ಸನ್ಮಾನ್ಯ ಅಧ್ಯಕ್ಷರೆ, ಕೆಲವೇ ಇಲಾಖೆಗಳಿಗೆ ಸಂಬಂಧಪಟ್ಟಂತೆ ತಮ್ಮ ಹಾಗೂ ಸದನದ ಗಮನ ಸೆಳೆಯುವುದಕ್ಕೆ ಇಷ್ಟ ಪಡುತ್ತೇನೆ. - ನಮ್ಮ ರಾಷ್ಟ್ರ ಹಳ್ಳಿಗಳಿಂದ ಕೂಡಿದ್ದ ರಾಷ್ಟ್ರ. ಈ ರಾಷ್ಟ್ರದಲ್ಲಿ ಏಳು ಲಕ್ಷ ಹಳ್ಳಿಗಳು ಇವೆ. ನಮ್ಮ ರಾಜ್ಯದಲ್ಲಿ 25,000 ಹಳ್ಳಿಗಳಿವೆ. ಈ ಹಳ್ಳಿಗಳ ಸರ್ವಾಂಗೀಣ ಅಭಿವೃದ್ಧಿ ಆಗಬೇಕಾಗಿದೆ ಶೇಕಡ 70 ರಷ್ಟು ಜನ ನಾವು ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದೇವೆ. ಆ ಪ್ರದೇಶದ ಅಭಿವೃದ್ಧಿ ಆದರೆ ಮಾತ್ರ ಒಟ್ಟಾರೆ ರಾಷ್ಟ್ರದ ಅಭಿವೃದ್ಧಿ ಆಗುವುದಕ್ಕೆ ಸಾಧ್ಯ. ಹಳ್ಳಿಗಳಲ್ಲಿ ಹಳ್ಳಿಗಳ ಅಭಿವೃದ್ಧಿಗೆ ಮೂಲಭೂತವಾದ ಪಂಚಾಯಿತಿ ರಾಜ್ ವ್ಯವಸ್ಥೆ ಏನಿದೆ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ವ್ಯವಸ್ಥೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಎರಡು ಲಕ್ಷ ಇರುವುದನ್ನು ಮೂರೂವರೆ ಲಕ್ಷಕ್ಕೆ ಏರಿಸಿದ್ದಾರೆ. ಇದು ಸ್ವಾಗತಾರ್ಹ. ಆದರೆ ಇವತ್ತಿನ ದಿವಸ ನಮ್ಮ ಹಳ್ಳಿಗಾಡಿನಲ್ಲಿರುವ ವಸ್ತು ಸ್ಥಿತಿ ಏನಿದೆ, ಆ ಪಂಚಾಯಿತಿಗಳ ಜವಾಬ್ದಾರಿ ಏನಿದೆ, ಅವರು ನಿರ್ವಹಿಸಬೇಕಾದ ಕರ್ತವ್ಯಗಳು ಏನು ಇವೆ, ಅದನ್ನು ಯೋಚನೆ ಮಾಡಿದ್ದೇ ಆದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇಲ್ಲ, ತಮ್ಮ ಮುಖಾಂತರ ನಾನು ಮನವಿ ಮಾಡುವುದು ಏನೆಂದರೆ ನಾಳೆ ಉತ್ತರ ಕೊಡುವ ಸಂದರ್ಭದಲ್ಲಿ ಕನಿಷ್ಟ ಐದು ಲಕ್ಷಕ್ಕಾದರೂ ಘೋಷಣೆ ಮಾಡಬೇಕೆಂದು ಹೇಳಿ ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತೇನೆ. ಹೊಸದಾಗಿ ಕೆಲವಾರು ಜವಾಬ್ದಾರಿಗಳನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಅವರ ಭಾಷಣದಲ್ಲಿ ಹೇಳಿದ್ದಾರೆ. ಪ್ರಾಥಮಿಕ ಶಾಲೆಗಳು ಮತ್ತು ಅಂಗನವಾಡಿ ಕೇಂದ್ರಗಳನ್ನು ನಿರ್ವಹಿಸತಕ್ಕಂಥದ್ದು, ಭೂ ಕಂದಾಯ ವಸೂಲಿ ಮಾಡುವುದು, ಹೀಗೆ ಕೆಲವಾರು ಜವಾಬ್ದಾರಿಗಳನ್ನೂ ಈ ಪಂಚಾಯಿತಿಗಳಿಗೆ ಕೊಡುತ್ತೇವೆಂದು ಹೇಳಿದ್ದಾರೆ, ಬಹಳ ಸಂತೋಷ. ಆದರೆ ನನ್ನ ಕಳೆದ 40-45 ವರ್ಷಗಳ ಅನುಭವ ನಿಮಗೆ ಹೇಳುವುದಾದರೆ ಇದು ಬಹಳ ಹೆಚ್ಚಿನ ಜವಾಬ್ದಾರಿ. It is too early ಎಂದು ನನಗನ್ನಿಸುತ್ತದೆ. ಆದಾಗ್ಯೂ ಕೂಡ ಮುಂದಿನ ವರ್ಷ ನಾವು ಇದನ್ನು ಮುಖ್ಯವಾಗಿ ವಿಮರ್ಶೆ ಮಾಡಿ ನೋಡಬೇಕು. ಸ್ವಚ್ಛ ಗ್ರಾಮ ಯೋಜನೆ ವಿಷಯದಲ್ಲಿ ಏನು 1,000 ಹಳ್ಳಿಗಳಲ್ಲಿ ಸ್ವಚ್ಛ ಗ್ರಾಮ ಕಾರ್ಯಕ್ರಮ ಕೈಗೊಳ್ಳುತ್ತೇವೆಂದು 2000-2001 ರಲ್ಲಿ ಹೇಳಿದ್ದರು. ಅದನ್ನೂ ಕೂಡ ಅಚೀವ್ ಮಾಡುವುದಕ್ಕಾಗಲಿಲ್ಲ. ನಾವು ಇದಕ್ಕೆ ಕಾರಣವೇನೆಂದು ಯೋಚನೆ ಮಾಡಬೇಕಾಗುತ್ತದೆ. ಈ ಇಲಾಖೆಗೆ ಸಂಬಂಧಪಟ್ಟಂತೆ ಬಹಳ ಒಳ್ಳೆಯ